Motion to pass

Sri M. V. KRISHNAPPA.—Sir, I move:

"That the Land Revenue (Amendment) Bill, 1965, be passed."

Mr. DEPUTY SPEAKER—The question is :

"That the Mysore Land Revenue (Amendment) Bill, 1965, be passed."

The motion was adopted.

MYSORE LAND REFORMS (AMENDMENT) BILL, 1965

(Debate continued)

5-30 P.M.

†ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಸ್ವಾಮಿ, ನಾನು ನಿನ್ನೆ ಮಾತನಾಡುವಾಗ, ಭೂಮಸೂದೆಯ ಮೂಲ ಮಸೂದೆಯನ್ನು ಸ್ವಾಗತಿಸಿದ್ದರೂ, ಈ ತಿದ್ದುಪಡಿ ಮಸೂದೆಯಲ್ಲಿ ಅಡಕವಾಗಿರುವ ಕೆಲವು ತಿದ್ದುಪಡಿಗಳನ್ನು ಬಹಳ ತೀವ್ರವಾಗಿ ವಿರೋಧಿಸುತ್ತೇನೆ. ಏತಕ್ಕೆಂದರೆ, ಈ ತಿದ್ದುಪಡಿಯಿಂದ ಇನ್ನೂ ಕೆಲವು ಚಾಲಗೇಣಿ ರೈತರನ್ನು ನೆಲ ಬಿಟ್ಟು ಓಡಿಸುವ ಪರಿಸ್ಥಿತಿ ಇದೆ. ಈಗಾಗಲೇ ಈ ಮಸೂದೆಯನ್ನು ಜಾರಿಗೆ ತರುವವರಾದ ತಾವು ಧೀರ್ಘ ಕಾಲವನ್ನು ಇದರಲ್ಲಿ ಕಳೆವಿದ್ದೀರಿ. ಸಾಧಾರಣವಾಗಿ ಈ 17 ವರ್ಷಗಳಿಂದ ಯಾರ್ಯಾರು ಭೂಮಾಲಿಕರಿದ್ದಾರೊ ಅವರ ಹಿತರಕ್ಷಣೆಯನ್ನು ಕಾಪಾಡುತ್ತಿದ್ದೀರಿ. ಯಾರು ನಿಜವಾದ ನೇಗಿಲಯೋಗಿಯೊ ಅವನು ನೆಲ ಬಿಟ್ಟು ಹೋಗುವಂತೆ ತಾವು ಮಾಡಿದ್ದೀರಿ. ಈಗಾಗಲೇ ಸಾಧಾರಣವಾಗಿ ಶೇಕಡ 50ಕ್ಕೂ ಮೀರಿ ಚಾಲುಗೇಣಿ ರೈತರು ತಮ್ಮ ಹೊಲವನ್ನು ಬಿಟ್ಟು ಹೋಗಿ, ಭಿಕ್ಷೆ ಬೇಡುತ್ತಿದ್ದಾರೆ; ತಿರುಕರ ಹಾಗೆ ತಿರುಪೆಗೆ ಹಚ್ಚಿದ್ದಾರೆ. ಇದರಲ್ಲಿಯೂ ಕೂಡ ಇನ್ನೂ ಒಂದು ಸಮನ್ವಯಿ ಕಾನೂನನ್ನು ತರದೆ, ಇನ್ನೂ ಕೆಲವು ಒಕ್ಕಲುಗಳು ತಮ್ಮ ಸಾಗುನೆಲವನ್ನು ಬಿಟ್ಟು ಹೋಗುವಂತೆ ತಾವು ಬಿಲ್ಲಿನಲ್ಲಿ ಕೆಲವು ತಿದ್ದುಪಡಿಗಳನ್ನು ಅಡಕ ಮಾಡಿದ್ದೀರಿ. ಈ ಮಠಗಳ ವಿಷಯದಲ್ಲಿ ಈಗಾಗಲೇ ಸರಕಾರದ ವತಿಯಿಂದ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಅದು ನನಗೆ ಅರ್ಥವಾಗುವುದಿಲ್ಲ. ಕೆಲವು ದೇವಸ್ಥಾನಗಳನ್ನು ಬಿಟ್ಟು, ಬಾಕಿ ಮಠಗಳಿಗೆ ಮಸೂದೆಯ ಮಿತಿ ಬರುತ್ತದೆ ಎಂದು ಹೇಳುವ ಸಂದರ್ಭವನ್ನು ಇಲ್ಲಿ ಒದಗಿಸಿ ಕೊಟ್ಟಿದ್ದಾರೆ. ಈ 20 ದೇವಸ್ಥಾನಗಳ ಬಗ್ಗೆ ಒಂದು ಸಂಶಯವಾಗುತ್ತಿದೆ. For the words "from Government" the words "from the Government or lands belonging to or held on lease from religious or charitable institutions managed by or under the control of the State Government shall be substituted." ಎಂದು ಹೇಳಿದ್ದಾರೆ. ರಿಲಿಜಿಯಸ್ ಇನ್‌ಸ್ಟಿಟ್ಯೂಶನ್ನುಗಳು ಎಂದರೆ ನನಗೆ ಅರ್ಥವಾಗುವುದಿಲ್ಲ. ನಮ್ಮ ಜಿಲ್ಲೆಯ ಮಟ್ಟಿಗೆ ಮತ್ತು ಮೈಸೂರು ರಾಜ್ಯದ ಮಟ್ಟಿಗೆ ಹೇಳುವುದಾದರೆ, ಕೆಲವು ಧಾರ್ಮಿಕ ಸಂಸ್ಥೆಗಳು ತಮ್ಮ ಭೂಮಿಯನ್ನು ಹೊಂದಿವೆ; ಮಾತ್ರವಲ್ಲದೆ, ಕೆಲವು ಧಾರ್ಮಿಕ ಸಂಸ್ಥೆಗಳು ಮತ್ತು ಮಠಗಳು ರಾಜಕೀಯದ ಒಂದು ದೊಡ್ಡ ಬೀಡು ಆಗಿವೆ. ಇಲ್ಲಿ ಇರುವಷ್ಟು ರಾಜಕೀಯ, ರಾಜಕೀಯ ಪಕ್ಷಗಳು ಇನ್ನೆಲ್ಲಿಯೂ ಇರುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಮಠಗಳಿಗೆ ಸಂಬಂಧಪಟ್ಟಂತೆ, ಸಾಧಾರಣವಾಗಿ 100-150 ಒಕ್ಕಲುಗಳು ಮಠದ ನೆಲವನ್ನು ಸಾಗು ಮಾಡುತ್ತಿದ್ದಾರೆ. ಒಂದು ವೇಳೆ ಈ ಮಠಗಳಿಗೆ ಈ ರಿಯಾಯಿತಿ ಕೊಟ್ಟಲ್ಲಿ, ನಾನು ಸರಕಾರಕ್ಕೆ ಹೇಳುತ್ತೇನೆ. ತಾವು ಏನು ಮೂಲ ಉದ್ದೇಶವನ್ನು ಇಟ್ಟುಕೊಂಡಿದ್ದೀರೊ, ಒಕ್ಕಲುಗಳ ಹಿತವನ್ನು ರಕ್ಷಿಸುವ, ಉಳುವವನಿಗೆ ಹೊಲವನ್ನು ದೊರಕಿಸುವ ಧ್ಯೇಯವನ್ನು ಏನು ಇಟ್ಟುಕೊಂಡಿದ್ದೀರೊ, ಆ ಧ್ಯೇಯ ಇದರಲ್ಲಿ ಸಂಪೂರ್ಣವಾಗಿ ಹಾಳಾಗಿ ಹೋಗುತ್ತದೆ.

ತಾವು ಕೆಲವು ಪರಿಮಿತಿಯನ್ನು ವಿನಾಯಿತಿ ಗೊಳಿಸಿದ್ದೀರಿ.

As regards plantations, the limit of one hundred acres for development of plantation fixed in clause (ii) of the explanation to section 104 will be deleted, and the limitation on the interspersed land specified by clause (iii) of the same explanation will also be deleted.

ಇದನ್ನು ವಿಚಾರ ಮಾಡಲಿಕ್ಕೂ ಕಷ್ಟವಾಗುತ್ತದೆ. ತೋಟಗಳು (ಪ್ಲಾಂಟೇಶನ್ನುಗಳು) ಏನಿವೆ, ಅವುಗಳಿಗೆ ತಾವು ಯಾವ ಮಿತಿಯನ್ನೂ ಹಾಕದೆ, ವಿನಾಯಿತಿಯನ್ನು ಕೊಟ್ಟಿದೆ ಎಂದು ಹೇಳುವಾಗ ಇವು ಫಾರಿನ್ ಎಕ್ಸ್‌ಚೇಂಜ್ ಅರ್ನ್ ಮಾಡುವ ವಸ್ತುಗಳಾದ್ದರಿಂದ ಇವಕ್ಕೆ ವಿನಾಯಿತಿ ಕೊಡಲಾಗಿದೆ ಎಂದು ಹೇಳಿದಿರಿ. ತಾವು ತೋಟಗಳಿಗೆ ವಿನಾಯಿತಿ ಕೊಟ್ಟದ್ದು ಮಾತ್ರವಲ್ಲದೆ, ತೋಟಗಳ ಮಧ್ಯ ಭಾಗವಲ್ಲಿರುವ ಭೂಮಿಗೂ ಕೊಟ್ಟು, ಈ ಮಸೂದೆಗೆ ಲಗತ್ತು ಆಗದ ಸಂದರ್ಭವನ್ನು ಇದರಲ್ಲಿ ಒದಗಿಸಿ ಕೊಟ್ಟಿದ್ದೀರಿ. ತೋಟಗಳ ಮಧ್ಯದಲ್ಲಿ ಸಾಧಾರಣವಾಗಿ 200 ಎಕರೆಗಳಿಗಿಂತಲೂ ಹೆಚ್ಚು ಭೂಮಿ ಈ ರೈತರ ಸ್ವಾಧೀನದಲ್ಲಿರುತ್ತದೆ. ಭೂಮಾಲಿಕನಿಗೆ ಮಿತಿಯನ್ನು ಹಾಕಬಾರದು ತೋಟಗಾರರಿಗೆ ಬಹಳ ತೊಂದರೆಯಾಗುತ್ತದೆಂದು ಹೇಳಿದರೆ, ಇದರಿಂದ ಏನು ಅರ್ಥವಾಗುತ್ತದೆ. ಕೆಲವು ಭಿಕ್ಷುಕರುಗಳು ಭಿಕ್ಷೆ ಬೇಡುವುದಕ್ಕೆ ಕೃತಕ ಅಂಗಗಳನ್ನು ದಾರಿಯಲ್ಲಿ ಪ್ರದರ್ಶಿಸುತ್ತಿರುತ್ತಾರೆ. ಅಂತೆಯೆ ನಮ್ಮ ಸರ್ಕಾರ ಮಾಡುತ್ತಿದೆ. ಒಂದು ಕಡೆ ಹಾವೂ ಸಾಯಬಾರದು, ಕೋಲೂ ಮುರಿಯಬಾರದು. ಈ ಒಂದು ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು, ಈ ಮಸೂದೆಯನ್ನು ತಂದಂತೆ ತೋರುತ್ತದೆ. ತಾವು ದೊಡ್ಡ ಭೂಮಾಲಿಕರ, ಇಲ್ಲವೆ ತೋಟಗಾರರ, ಈ ಒಂದು ದುಷ್ಟ ಶಕ್ತಿಗಳಿಗೆ ಒಳಗಾಗಿ ಈ ಒಂದು ವಿನಾಯಿತಿಯನ್ನು ಅವರಿಗೆ ತೋರಿಸಿದ್ದೀರಿ, ಅದರೆ ಇಷ್ಟು ಮಾತ್ರಕ್ಕೆ ತೋರಿಸಬಾರದು. ಇದಕ್ಕೂ ಕೂಡ ಮಿತಿ ಹಾಕಬೇಕು. ಈ ಮಧ್ಯೆ ಭೂಮಿಯನ್ನು ಅವರಿಗೆ ಬಿಟ್ಟಿಲ್ಲ, ಅದು ರೈತರ ಸ್ವಾಧೀನದಲ್ಲಿದ್ದರೆ, ರೈತ ಭೂಮಿಯನ್ನು ಬಿಟ್ಟು ಹೋಗಬೇಕಾಗುತ್ತದೆ. ತಾವು ಇದಕ್ಕೂ ಕೂಡ ಮಿತಿಯನ್ನು ಹೊರಿಸಬೇಕು. ಈ ಭೂಮಿಯನ್ನು ರೈತರಿಗೆ ವರ್ಗಾಯಿಸಿ ಕೊಡಬೇಕು.

ಅಮೇಲೆ the amount of compensation payable in cash under section 51 will be limited to two thousand rupees instead of ten thousand rupees ಎಂದು ಹೇಳಿ ತಿದ್ದುಪಡಿ ತಂದಿದ್ದೀರಿ. ತಾವು ಏನೋ ಶುರುವಿನಲ್ಲಿ 10 ಸಾವಿರ ರೂಪಾಯಿ ಕೊಟ್ಟು, ಅಮೇಲೆ ಮಿಕ್ಕದ್ದನ್ನು ಬಾಂಡಿನಲ್ಲಿ ಕೊಡುವುದೆಂದು ಮೂಲ ಮಸೂದೆಯಲ್ಲಿ ಹೇಳಿದ್ದರೂ, ಆ 10 ಸಾವಿರ ರೂಪಾಯಿಯನ್ನು ಇಲ್ಲಿ 2 ಸಾವಿರ ರೂಪಾಯಿಗೆ ತಂದಿಟ್ಟಿದ್ದೀರಿ. ಕೆಲವು ವೇಳೆ ನಿರ್ಗತಿಕರಾದ ಭೂಮಾಲಿಕರಿದ್ದಾರೆ. ಅವರು ಭೂಮಿಯನ್ನೇ ನಂಬಿ ಕೊಂಡಿರುತ್ತಾರೆ; ಅವರು ಸ್ವಂತ ಭೂಮಿಯನ್ನು ಕಳೆದುಕೊಂಡರೆ ಅವರ ಗತಿ ಏನು ? ತಮ್ಮ ಸರಕಾರದಲ್ಲಿ ರೂಪಾಯಿಯ ಮೌಲ್ಯ 17 ಪೈಸೆ ಆಗಿದೆ. ಎರಡು ಸಾವಿರ ರೂಪಾಯಿ ತೆಗೆದುಕೊಂಡು ಒಂದು ಸಣ್ಣ ಬೀಡಿ ಅಂಗಡಿಯನ್ನೂ ಇಡುವುದಕ್ಕಾಗುವುದಿಲ್ಲ. ಕಾಂಗ್ರೆಸ್ ಸರಕಾರ ಬಂದ ಮೇಲೆ ನಾಣ್ಯ ಮಾಡಿದರು ; ಅದರ ಬೆಲೆ ದಿವಸಾ ಕುಂದುತ್ತಾ, ತಗ್ಗುತ್ತಾ ಹೋಗುತ್ತಿದೆ. ಇಷ್ಟು ಸಣ್ಣ ಪ್ರಮಾಣದ ಹಣದಿಂದ ಒಂದು ಸಣ್ಣ ಬೀಡಿ ಶಾಪ್ ಇಡಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಅವರಿಗೆ ಮೂಲ ಮಸೂದೆಯಲ್ಲಿ ಹೇಳಿದ್ದಂತೆ 10 ಸಾವಿರ ರೂಪಾಯಿಯಷ್ಟನ್ನಾದರೂ ಕಾಂಪೆನ್ಸೇಶನ್ನಾಗಿ ಕೊಡಬೇಕು. ಈ ಬಾಂಡುಗಳನ್ನು ಕೊಡಿಸುವುದು ಹಾಸ್ಯಾಸ್ಪದವಾಗಿದೆ. ಬಿಹಾರ ಮತ್ತು ಇನ್ನಿತರ ರಾಜ್ಯಗಳಲ್ಲಿ ಈ ಬಾಂಡಿನ ಸ್ಥಿತಿ ಏನಿವೆ ಅನ್ನುವುದು ಗೊತ್ತಿದೆ. ರೈತನಿಗೆ ಬಾಂಡ್ ಕೊಟ್ಟರೆ, ಅದು ಮಾರ್ಕೆಟ್ಟಿನಲ್ಲಿ ಹೋಗುವುದಿಲ್ಲ; ಯಾವುದಾದರೂ ಬ್ಯಾಂಕಿನಲ್ಲಿ ಅಡವು ಇಟ್ಟುಕೊಂಡು ಹಣ ಕೊಡುವುದಿಲ್ಲ. ಇಂಥ ಬಾಂಡ್ ತೆಗೆದುಕೊಂಡು ಬೆಲ್ಲ ಹಾಕಿ ನೆಕ್ಕಬೇಕು. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಮ್ಮ ಮೈಸೂರು ರಾಜ್ಯದ ಬಂಡವಾಳದ ಸ್ಥಿತಿಯನ್ನು ಶ್ರೀಮಾನ್ ಜತ್ತಿಯವರು ಹೇಳಿರುವುದನ್ನು ನಾವೆಲ್ಲಾ ಕೇಳಿದ್ದೇವೆ. ಇಂಥ ಬಂಡವಾಳವಿಲ್ಲದ ಸರಕಾರದ ಬಂಡವಾಳವನ್ನು (ಬಾಂಡನ್ನು) ತೆಗೆದುಕೊಂಡು ರೈತನು ಏನು ಮಾಡಬೇಕು ? ಬಾಂಡುಗಳಿಂದ ಏನೂ ಪ್ರಯೋಜನವಿಲ್ಲ. ಬಾಂಡುಗಳನ್ನು ಕೊಡುವ ಬದಲು, ಇಷ್ಟಿಷ್ಟು ಕಂತುಗಳಲ್ಲಿ ಹಣವನ್ನು ಕ್ಯಾಶಿನಲ್ಲಿ ಕೊಡಿ. ಶುರುವಿಗೆ ಕೊಡುವಂಥ ಮೊಬಲಗು 10 ಸಾವಿರ ರೂಪಾಯಿಯಾದರೂ ಇದ್ದು, ಇನ್ನು ಮಿಕ್ಕದ್ದನ್ನು ಕಂತಿನಲ್ಲಿ ಹಣದ ರೂಪವಾಗಿ ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ.

ಇನ್ನೊಂದು ಸ್ಪೆಷಲ್ ಪ್ರಾವಿಷನ್ ಮಾಡಿದ್ದಾರೆ. ಅದೇನೆಂದರೆ :

> Special provisions made in favour of the members of the Armed Forces of the Union are made applicable to the personnel of the Merchant Navy.

ಮಿಲಿಟರಿಯವರಿಗೆ ಸ್ಪೆಶಾಲಿಟಿ ತೋರಿಸುವುದು ತುಂಬಾ ತಪ್ಪು. ಇವರಿಗಿಂತಲೂ ಕೀಳಾದ ಕೆಲಸಗಳನ್ನು ಹೊಂದಿರುವವರು ಇದ್ದಾರೆ. ಉದಾಹರಣೆಗೆ, ಕೆಲವು ಟೀಚರುಗಳಿಗೆ 60 ರೂಪಾಯಿ ಸಂಬಳವಿಲ್ಲ. ಅವರು ಹೇಗೋ ಜೀವನ ಮಾಡಿಕೊಂಡಿದ್ದಾರೆ. ಅವರಿಗೆ ಒಂದೆರಡು ಎಕರೆ ಲ್ಯಾಂಡ್ಸ್

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಮಾತ್ರ ನಮ್ಮ ಊರಿನಲ್ಲಿದೆ. ಇಂಥವರು ಮತ್ತು ಕೆಲವು ಸರ್ಕಾರಿ ನೌಕರರಿಗೆ ಇದೇ ರೀತಿ ವಿನಾಯಿತಿ ಕೊಡಬೇಕು. ಮಿಲಿಟರಿಯವರಿಗೆ ಕೊಟ್ಟರೆ ಇವರಿಗೂ ಕೊಡಬೇಕು. ಮಿಲಿಟರಿಯವರಿಗೆ ಬೇಕಾದಷ್ಟು ಸವಲತ್ತುಗಳನ್ನು ಕೊಡುತ್ತಾ ಇರುತ್ತಾರೆ. ಅವರ ಮಕ್ಕಳಿಗೆ ಧರ್ಮಾರ್ಥ ವಿದ್ಯಾಭ್ಯಾಸವಿದೆ; ಧರ್ಮಾರ್ಥ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುತ್ತಾ ಇದ್ದೀರಿ. ಇಂಥಾ ಎಲ್ಲಾ ಸೌಲಭ್ಯ ಇವರಿಗೆ ಸಿಗುತ್ತಾ ಇರುವಾಗ, ಅವರು, ಅವರ ಮಕ್ಕಳು ಮರಿಮಕ್ಕಳಿಂದ ಚಾಲುಗೇಣಿ ರೈತ ಭೂಮಿಯನ್ನು ಬಿಡಿಸಿಕೊಳ್ಳುವ ಹಾಗಿಲ್ಲವೆಂತ ಹೇಳಿದರೆ, ಇದು ತುಂಬಾ ತಪ್ಪು. ಆದ್ದರಿಂದ ಈ ಕ್ಲಾಜನ್ನು ತೆಗೆದುಬಿಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಒಟ್ಟಾರೆ ಹೇಳುವುದಾದರೆ, ಈ ಬಿಲ್ಲಿನಲ್ಲಿ ಅಡಗಿರುವ ಕೆಲವು ತಿದ್ದುಪಡಿಗಳು ನಿಜವಾಗಿಯೂ ರೈತರಿಗಾಗಿ ರಕ್ಷಣೆ ಮಾಡುವಂತಹುವಲ್ಲ ಆದುದರಿಂದ ಈಗಲಾದರೂ ಎಲ್ಲೆಲ್ಲಿ ಯಾವ ರೀತಿಯಾದ ಕಾನೂನುಗಳಿವೆಯೋ ಅವುಗಳನ್ನು ತರಿಸಿಕೊಂಡು ಏಕರೂಪವಾದ ಒಂದು ಕಾನೂನನ್ನು ಮಾಡಿದರೆ ಅದರಿಂದ ಹೆಚ್ಚು ತೊಂದರೆಯಾಗಲಿಕ್ಕಿಲ್ಲ. ಅಲ್ಲದೆ ಈ ಬಿಲ್ಲಿನಲ್ಲಿ ಅತ್ಯಾವಶ್ಯಕವಾದ ತಿದ್ದುಪಡಿಗಳನ್ನು ತರಬೇಕೆಂದು ಕೇಂದ್ರ ಸರ್ಕಾರದವರು ಹೇಳಿದಂತೆ ತರಬೇಕೆಂದು ಹೇಳಿದ್ದರೂ ಅದನ್ನೂ ಇಲ್ಲಿ ಅಷ್ಟು ಮಟ್ಟಿಗೆ ಮಾಡಿ ತರಲಿಲ್ಲ. ಇದನ್ನು ತರಬೇಕಾದರೆ ಈಗಾಗಲೇ 17 ವರ್ಷಗಳ ಕಾಲವನ್ನು ಕಳೆದಿದ್ದಾರೆ. ಆದುದರಿಂದ ಇನ್ನೂ ಸ್ವಲ್ಪ ಸಮಯ ಬೇಕಾದರೆ ತೆಗೆದುಕೊಂಡು ಈ ಸಭೆಯ ಸದಸ್ಯರುಗಳನ್ನೊಳಗೊಂಡ ಒಂದು ಸೆಲೆಕ್ಟ್ ಕಮಿಟಿಗೆ ಕಳುಹಿಸಬಹುದು. ಹಿಂದೆ ಮಾಡಿದಂತಹ ಜಂಟಿ ಸೆಲೆಕ್ಟ್ ಕಮಿಟಿಯವರೇ ಸುಮಾರು ನಾಲ್ಕು ವರ್ಷಗಳ ಕಾಲ ತೆಗೆದುಕೊಂಡರು. ಹಾಗೆ ಮಾಡದೆ ಇಲ್ಲಿ ಮಾಡುವ ಕಮಿಟಿಯನ್ನು ಸ್ವಲ್ಪ ದಿನಗಳಲ್ಲಿ ಅವರ ವರದಿಯನ್ನು ಕೊಡುವಂತೆ ಮಾಡಿ ಮತ್ತು ಸಾರ್ವಜನಿಕರ ಅವಗಾಹನೆಗಾಗಿ ಈಗಿರುವ ಬಿಲ್ಲನ್ನು ಪ್ರಕಟಣೆ ಮಾಡಿ, ನಂತರ ತಂದರೆ ಆಗಲಾದರೂ ಅಲ್ಪಸ್ವಲ್ಪ ದೋಷಗಳನ್ನಾದರೂ ನಿವಾರಣೆ ಮಾಡಬಹುದು. ಅದು ಸಾಧ್ಯವಿಲ್ಲದಿದ್ದರೆ ಒಂದು ಜಂಟಿ ಸೆಲೆಕ್ಟ್ ಕಮಿಟಿ ಮಾಡಿ ಇನ್ನು 10–15 ದಿನಗಳ ಒಳಗೇನೆ ಅವರಿಂದ ರಿಪೋರ್ಟ್ ತರಿಸಿಕೊಂಡು ಈ ಮಸೂದೆಯನ್ನು ಇಲ್ಲಿ ತಂದು ಅನಂತರ ಪಾಸು ಮಾಡಬಹುದು. ಹೀಗೆ ಅವಸರವಸರವಾಗಿ ತಂದರೆ ರೈತರಿಗೆ ಬಹಳ ತೊಂದರೆಗಳಾಗುತ್ತವೆ. ಆದುದರಿಂದ ನಾನು ಹೇಳಿದಂತಹ ನ್ಯೂನತೆಗಳನ್ನೆಲ್ಲಾ ನಿವಾರಣೆಮಾಡಲು ಈಗಿರುವ ಕಾಂಗ್ರೆಸ್ಸು ಪಕ್ಷದ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಇದನ್ನು ಮಾಡುತ್ತಾರೆ ಎಂದು ನಂಬಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ ಮತ್ತು ನನಗೆ ಇಷ್ಟು ಅವಕಾಶಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನೂ ವಂದಿಸುತ್ತೇನೆ.

† **Sri G. V. GOWDA.**—Mr. Speaker, Sir, I have carefully gone through several amendments that have been suggested to the Mysore Land Reforms Act of 1961. Sir, the excuse for the delay in implementing the Land Reforms Act is that certain suggestions were made by the Planning Commission and the Government of India and the Government of Mysore had to take such a lot of time to consider those suggestions to amend the several provisions of this Act. Sir, when I went through the amendments now brought in, I find that hardly one or two suggestions that have been made by the Planning Commission have been incorporated. In answer to one of my questions, the Government have furnished a reply as to the various suggestions that have been made by the Planning Commission and they go to the extent of 18 to 19 suggestions. The important suggestions that have been made by the Planning Commission have not been considered or I should say they have been completely ignored and given a go-bye. Sir, by adopting these amendments now, little material change would be brought about so far as Land Reforms Act is concerned and it will not, to any extent, serve the cause of the agriculturist. Sir, our slogan has been that people who exert on the land and people who bring about cultivation must be the masters of the soil. To what extent that idea is going to be fulfilled whether there may be any occasion when we may be able to realise that particular

object making those people who actually the soil, masters of the soil has to be considered. Is it possible at any time whether it may be 50 years or 100 years to achieve that objective ? As I could see, it is impossible and we may not be having any occasion when we could make the people who physically exert themselves to be the masters of the soil. Sir, the fundamental principle with which the land reforms are being brought in the country is to see that ultimately the relationship between the tenant and the landlord is eliminated. We must see one day when all the people who work actually on the soil must become the masters of the soil and with that idea the land reforms are being brought about. Unless that is done, we cannot say whether we have done any reform at all. What is the meaning that we can give to the word 'reform' unless we see that justice is done to the man who does work. At least, if not now, ultimately, he must be made the absolute owner. Unless that is secured, I am afraid, we are not able to give any reforms at all so far as land tenure is concerned. Sir, by giving several exemptions, it is definitely not possible at any time, even let it be hundred years, to make the tillers owners of the soil. In the matter of land reforms, we will be doing something which will not serve any purpose at all if the tiller does not become the owner of the soil. One of the most imporant suggestions made by the Planning Commission is to see that the level of ceiling should be brought down to the level provided in Hyderabad law applicable to Karnatak area. That is also my suggestion. In fact when the provisions of Land Reforms Act were discussed in this House, several of us made representations saying that the ceiling limit that you are having in the Land Reforms Act is too much and it should be made to depend on several factors. It is conceded that the man who does actually the work and who tills the soil when he is made the absolute owner, you must see what extent of land he is able to cultivate. Supposing hundred acres are given, it cannot be said that he can physically bring about cultivation of 100 acres. The extent to which he would be able to bring under cultivation, that much of land must be the ceiling limit.

SRI H. D. DEVE GOWDA.—Is there any prohibition to appoint agricultural labour ?

SRI G. V. GOWDA.—Then there is no reform at all. Supposing you hire hundreds and thousands of people, then thousands of acres could be cultivated. Where is the reform ? The man who physically exerts him-self should me made the owner of the soil. When it is the solgan, we cannot justify that solgan by saying that cultivation could be done by hired labour. In fact even the definition that is given to the word' personal cultivation' is not consistent with the slogan that we have been making that the man who actually tills the soil will be the master of the soil. Personal cultivation should include residence in the village during the main agricultural season and this condition should be imposed. This is a suggestion made by the Planning Commission. Where is the amendment to that effect ? That has not been brought about. I was just

(SRI G. V. GOWDA)

mentioning about ceiling limit. We are having 27 standard acres as ceiling limit; one raiyat family of five members can have 27 standard acres as per provision of Section 23 of the Act ; this is first class land it is 36 acres of second class with one crop and assured supply of water, 45 acres where tank water is used and ultimately 250 acres of dry land one family of 5 persons could have.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರಾದ ಶ್ರೀಮಾನ್ ಜಿ. ವಿ. ಗೌಡರು, ಹೈರ್ಡ್ ಲೇಬರು ಇಟ್ಟುಕೊಂಡು ಮ್ಯಾನೇಜರನ್ನು ಇಟ್ಟುಕೊಂಡು ಪರ್ಸನಲ್ ಕಲ್ಟಿವೇಶನ್ನು ಮಾಡುವುದಾದರೆ ಹೈರ್ಡ್ ಲೇಬರ್ ಎಂದು ರೈತ ಮಾಡಿದರೂ ತಾತ್ವಿಕವಾಗಿ ಅದು ಸರಿಯಾದುದಲ್ಲ. ನಾನು ಹೇಳುತ್ತೇನೆ ನನ್ನ ಸ್ವಂತ ಅನುಭವದಲ್ಲಿ ಒಂದು ಐದು ಎಕರೆಗಳಷ್ಟು ಖುಷ್ಕಿ ಇಟ್ಟುಕೊಂಡು ವ್ಯವಸಾಯ ಮಾಡುವವನು ಅವನ ಮನೆಯಲ್ಲಿ ಆಳನ್ನು ಇಟ್ಟುಕೊಂಡು ಅವನನ್ನೂ ತನ್ನ ಮನೆಯವನಂತೆ ಸೇರಿಸಿ ಕೆಲಸ ಮಾಡುತ್ತಾನೆ. ಇದನ್ನು ನಾವೂ ನೋಡಿದ್ದೇವೆ.

Sri G. V. GOWDA.—Without labour, land cannot be better cultivated. That everybody knows ; but the person who owns the land must supervise and exert something on the land; simply living in Bombay and getting 500 acres through hired labour will not be good; labour can be hired to the extent necessary. Therefore, I am suggesting that the Government should come forward with several important suggestions that have been made by the Planning Commission and there could not be such an amount of delay of four years to incorporate such important amendments. They say that the level of ceiling should be brought down to the level of the Hyderabad Law; 9 standard acres is the uniform limit; supposing 27 standard acres are given; is it possible for a family of five persons to get it cultivated ? Is it possible ? When it is not possible, why do you have such a ceiling limit ? Unless it is given to a tenant, unless it is got cultivated on lease basis; it is impossible to cultivate by personal cultivate 27 first class standard acres. You can mechanise or do anything. It is impossible so far as our country is concerned. Therefore, it is rightly suggested that 9 standard acres should be made the ceiling limit and they have made that suggestion. The Government have not taken care to consider that aspect of the matter and they have delayed it by four years. Nine standard acres means that he would bring 2 crops with assured supply of water. Up to 18 standard acres, one family would have better cultivation, better return and better output. We should take into consideration the point of view of production-wether we can fully derive the benefit of that land in our possession. What is the use of having 200 acres ? This point should have been given the topmost priority by our Government and the Planning Commission suggestions should have been accepted.

Rights accruing and Tenency should not be taken away–that is another important suggestion that has been made and nothing has been done to incorporate any amendment in the existing law. If we are not able to have the limit of ceiling, at least this could have been done. Security of tenure is the most important thing.

There are provisions where resumption could be had if a man is working elsewhere and if he comes back to land after fifteen

years if he wants to cultivate the land personally, if he can convince the tribunal, then he can take and some portion may be given to him. In such cases, security of tenure is the most important thing. We do not want land reforms provided Government makes suitable changes and security must be given, fair rent must be fixed. We only recognise permanent tenants and they have been given some facilities and not tenants who are not called permanent tenants. That distinction need not have been made so far as the provision of this Act is concerned. Supposing he delays three or four years saying that he is not a permanent tenant, then I do not think that we are doing the right thing to the person who delays. Therefore, the Planning Commission's suggestion that the rights accruing and security of tenancy should not be taken away. But attempts have been made in this Act to take away the rights of tenants either by way of security of tenancy. What is the rent that you have fixed? one-fourth of the gross produce must be paid to the land-lord. Supposing he has incurred heavy expenditure that has to be met out of the 3/4 of the gross produce. If he is asked to pay one-fourth, what is it that he has to retain? Because, the cost of cultivation, the tenant is paying and in addition he is putting in his own labour. This aspect. nobody has taken into consideration—the labour that he puts in. Supposing the man is working in a factory, he gets 100 per mensem. If he works on the field, should he not get the same income? 100 per mensem which comes to Rs. 1200 per annum. If he is asked to pay 1/4 of the gross produce, that is not fair rent. He should have taken into consideration what should be the fair-rent and what is it that the landlord should get. We expect better production from the land, If we want the tenant to be more energetic, we have to take into consideration all these matters. The personal labour that the tenant puts in is not taken into consideration while calculating the cost of production. That point is totally ignored.

Resumption should not be permitted. That is one of the amendments that is not brought about. All transfers made after 10th May 1957 should be disregarded in computing surplus except *bona fide* sales for valuable consideration. The Planning Commission has suggested that transfers subsequent to 10th May 1957 should be disregarded for purposes of ceiling limit as well as for the purposes of resumption. Our Government have thought it fit to give effect to it from November 1961. There is an apprehension in the minds of some people saying that *bona fide* transfers made and the people who have purchased these lands may be effected. It is not a case where this bona fide transferee is going to be affected in the lease manner. It is only the transferer if he wants to resume the land, this will be taken into consideration while calculating to what extent he is entitled to resume. Supposing the ceiling is 27 standard acres and he has 40 standard acres ou that day. For purposes of resumption, he is not entitled because he has already with him 27 standard acres. Only for this purpose, the surplus that has been sold by those people

(SRI G. V. GOWDA)

will be taken into consideration. Therefore, the transferee will not be affected in any manner and there should not be any apprehension in that regard.

Only co-operative societies including land mortgage banks which are genuine should be exempted from ceiling and the ceiling area should be computed taking into account the share of the individual member. Anyway there is no amendment to that effect. It is only said that Government land, Government managed land or religious institutions which they are having under their control, should be exempted from the ceiling limit. In one way it may be accepted. But I want to seriously ask, when our idea is to abolish the tenancy system altogether ultimately, why should we give room for having these things, when they cannot come under personal cultivation at any time. If we cannot take into consideration that aspect of the matter, the only desirable thing is that the lands belonging to the religious institutions must be sold to the people who are really the tillers of the land, so that the temples or religious institutions could derive much more benefit than they are getting now. Sir, I can quote one instance. Our Mahadeswara temple has got 27 acres of wet lands. It is getting hardly Rs. 1000 per annum. If 25 acres of wet land is sold, we can get at least one lakh of rupees and if the temple is made to invest one lakh of rupees by constructing five bungalows in the city, it would fetch a rent of more than Rs. 2000 per annum for the

6-00 P.M.

temple and that amount can be spent for the improvement of the temple. So, we can have a way of eliminating this tenancy system at least in this view. I request the Minister to see that all these religious institutions are improved selling their lands to private individuals and invest that money in some other avocations to get more money for the improvement of those temples.

MR. DEPUTY SPEAKER.—The House will now rise and meet tomorrow at one P.M.

The House adjourned at Five Minutes past Six of the Clock to meet again at One of the Clock on Wednesday the 21st April, 1965.

WD 5040—GPB—500—10-9-65